**ಎನ್.ಮಹೇಶ್, ಶಿಡ್ಲಘಟ್ಟ**

*ಹೂವಿಗೂ, ಹೆಣ್ಣಿಗೂ ಇರುವ ನಂಟು ಯಾವುದು?*



ಲವಲವಿಕೆ.

**ಪಿ.ಜೆ. ರಾಘವೇಂದ್ರ, ನ್ಯಾಯವಾದಿ**

*ರಾಜ್ಯೋತ್ಸವ ಪ್ರಶಸ್ತಿ ಪಡೆಯುವಲ್ಲಿ ಯಶಸ್ವಿಯಾದರೆ ಅದೇ ಒಂದು ದೊಡ್ಡ ಸಾಧನೆಯಲ್ಲವೇ?*

ಲಂಚ ನೀಡಿದರೆ ಸಿಗುವ ಅದೂ ಒಂದು ಪ್ರಶಸ್ತಿಯೇ? ನಿಮ್ಮ ಚಪ್ಪಾಳೆಯ ಚಿನ್ನದ ಮುಂದೆ ಅದು ಕೇವಲ ಹಿತ್ತಾಳೆ!

**ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ**

*ಮಂಡ್ಯದ ಗಂಡು ಎನ್ನಲು ಕಾರಣವೇನು? ಉಳಿದ ಕಡೆಯಲ್ಲಿ ಗಂಡಸರೇ ಇಲ್ಲವೇ?*

ದಾವಣಗೆರೆಯಲ್ಲಲ್ಲದೆ ಬೆಣ್ಣೆ ದೋಸೆ ಇಲ್ಲವೇ? ಮಲೆನಾಡ ಹೆಣ್ಣಲ್ಲದೆ ಬೇರೆಯ ಹೆಣ್ಣೂ ಒಳ್ಳೆಯ ಬಣ್ಣ ಇರುವುದಿಲ್ಲವೇ? ಇದೂ ಒಂದು ಬ್ರ್ಯಾಂಡ್ ಅಷ್ಟೆ.

**ಎಂ.ಆರ್. ವಿದ್ಯಾನಾಗ್, ಬೆಂಗಳೂರು**

*ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ, ಗಂಡಿನ ಬುದ್ಧಿ?*



ಅವಳ ಕಾಲ ಹೆಬ್ಬೆರಳು ತೋಡಿದ ಗುಂಡಿಯಲ್ಲಿ!

**ಕೆ. ಚಂದ್ರಶೇಖರ, ಕೋಣನಕುಂಟೆ**

*ನ್ಯಾಯ ಬೇಕು, ನ್ಯಾಯ ಬೇಕು ಎಂದು ವಿಪಕ್ಷಗಳು ಇಲ್ಲದ್ದಕ್ಕೆ ಹಠ ಮಾಡುವುದು ಸರಿಯೇ?*

ಛೆ! ನ್ಯಾಯಾಲಯಗಳೇ ಕೆಲವೊಮ್ಮೆ ಕೊಡಲಾಗದ್ದನ್ನು ಸರ್ಕಾರ ನೀಡಲೆಂಬುದು ಶುದ್ಧ ಅನ್ಯಾಯ!

**ಆರ್. ಮಧುಸೂದನ್, ಹಾಸನ**

*ಸುಖಸಂಸಾರಕ್ಕೆ 12 ಸೂತ್ರಗಳು ಇದ್ದರೂ ಡೈವೋರ್ಸ್‌ಗಳು ಆಗ್ತಾನೇ ಇವೆಯಲ್ಲಾ?*

ಆ ಹನ್ನೆರಡೂ ಸೂತ್ರಗಳು ಸುಖಸಂಸಾರಕ್ಕೆ ಮೀಸಲು, ಸೂಖಾ (ಒಣಗಿದ) ಸಂಸಾರಕ್ಕೂ ಅವಕ್ಕೂ ಸಂಬಂಧವಿಲ್ಲ.

**ಪ್ರೆಸ್ ಶೇಖರ್, ಗೌರಿಬಿದನೂರು**

*ಲಗ್ನಪತ್ರಿಕೆಯಿಂದ ಹಿಡಿದು ತಿಥಿ ಕಾರ್ಡ್‌ವರೆಗೆ ಮುದ್ರಿಸಿಕೊಡುವ ಅನಿವಾರ್ಯತೆ ನನ್ನದು. ಇದಕ್ಕೆ ಆನಂದಿಸಲೇ, ಬೇಸರಿಸಲೇ?*

ದಯವಿಟ್ಟು ಬೇಸರಿಸಬೇಡಿ; ಬೇಸರಪಟ್ಟರೆ ಕಾರ್ಡುಗಳಲ್ಲಿನ ಹೆಸರು, ಕ್ರಿಯೆಗಳು ಅದಲುಬದಲಾಗಿಬಿಟ್ಟಾವು!

**ರಾಮಚಂದ್ರ ಎಂ. ಪೈ. ಹೊನ್ನಾವರ**

*ನಮ್ಮ ದೇಶವನ್ನಾಳುವ ಅಂದಿನ ಬಿಳಿಯರಿಗೂ, ಇಂದಿನ ಕರಿಯರಿಗೂ ಏನು ಅಂತರ?*

ಅವರು ದೋಚಿದ್ದು ಇಂಗ್ಲೆಂಡ್‌ಗೆ ರವಾನೆ, ಇವರು ದೋಚಿದ್ದು ಸ್ವಿಝರ್ಲೆಂಡ್‌ಗೆ ರವಾನೆ!

**ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ ಕ್ಯಾಂಪಸ್**

*ಕೋರ್ಟಿನಲ್ಲಿ ಕಕ್ಷಿದಾರನಿಗೆ ಮಾತ್ರ ಭಗವದ್ಗೀತೆ ಮುಟ್ಟಿಸಿ ಪ್ರಮಾಣ ಮಾಡಿಸುತ್ತಾರೆ; ಅದೇ ವಕೀಲರಿಗೇಕಿಲ್ಲ?*

ಭಗವದ್ಗೀತೆಯೇ ಸುಳ್ಳು ಎಂದು ವಾದ ಮಾಡಲು ಆರಂಭಿಸಿಬಿಟ್ಟಾರೆಂಬ ಭಯ!

**ಕೆ.ವಿ. ಶಿವಕುಮಾರ್, ಕಾಳಿಹುಂಡಿ**

*ರಾಜಕಾರಣಿಗಳಿಗೆ ವಾಸ್ತವದ ಪ್ರಜ್ಞೆಯೇ ಇಲ್ಲವಲ್ಲಾ?*

ಅಧಿಕಾರವೆಂಬ ದೇವನ ಹೆಂಡ ಸೇರಿದರೆ ಪ್ರಜ್ಞೆ ಹೇಗಿದ್ದೀತು ಬಿಡಿ.

**ಎಂ.ಸಿ. ಅರುಣ್ ಕುಮಾರ್, ಮೈಸೂರು**

*ಗೌತಮಬುದ್ಧ ಹೇಳಿರುವಂತೆ ದುಃಖಕ್ಕೆ ಕಾರಣ ಆಸೆಯಲ್ಲ, ಅದು ಅತೃಪ್ತಿ ಎಂದಿರಬೇಕಲ್ಲವೇ?*

ಅತೃಪ್ತಿ ಇರುವುದೇ ಆಸೆಯಿರುವುದರಿಂದಲ್ಲವೇ... ಪ್ರಬುದ್ಧ ಬುದ್ಧನ ಮಾತಿಗೆ ನಾನು ಬದ್ಧ.

**ಎಚ್.ಆರ್. ದೇಸಾಯಿ, ರಾಯಚೂರು**

*ಸಾಯೋಕ್ಕುಂಚೆ ಏನಾದರೂ ಒಳ್ಳೆಯದನ್ನು ಮಾಡಬೇಕೆಂಬ ಪ್ರೇರಣೆಯಾಗಿದೆ; ಏನು ಮಾಡಿದರೆ ......?*

ಮುಗುಳ್ನಗೆ, ತಿಳಿನಗೆಯನ್ನು ಹಂಚಿರಿ; ಯಮನೂ ನಗುನಗುತ್ತಾ ಸ್ವರ್ಗಕ್ಕೊಯ್ದಾನು!

## ಬಹುಮಾನಿತ ಪ್ರಶ್ನೆ

**ಬಿ.ಎಂ. ಪರಶಿವಮೂರ್ತಿ, ಬೆಂಗಳೂರು**

*ವಿವಾಹಿತೆ ತಾನು ಮುತ್ತೈದೆಯಾಗಿಯೇ ಸಾಯಲು ಬಯಸುತ್ತಾಳೆ; ವಿವಾಹಿತ ಗಂಡಸು?*

ಅವನೂ ಅಷ್ಟೆ; ಹೆಂಡತಿ ಮುತ್ತೈದೆಯಾಗಿ ಸಾಯಲೆಂದೇ ಬಯಸುತ್ತಾನೆ!

**ನಾಗಲಕ್ಷ್ಮಿ ಆರ್, ಕತ್ತರಗುಪ್ಪೆ**

*ವಿರಸದ ನಂತರದ ಸರಸಕ್ಕೂ, ಸರಸದ ನಂತರದ ವಿರಸಕ್ಕೂ ಏನು ವ್ಯತ್ಯಾಸ?*

ಒಂದು ಹೂಮಳೆ, ಇನ್ನೊಂದು ಚಂಡಮಾರುತ.

**ಮಾಲತಿರಾಜು, ಬೆಂಗಳೂರು**

*ತಮ್ಮ ಮಗಳು ಮಾತ್ರ ಆಗಿಂದಾಗ್ಗೆ ಮನೆಗೆ ಬರುತ್ತಿರಬೇಕು, ಸೊಸೆ ಮಾತ್ರ ತವರಿಗೆ ಹೋಗಬಾರದು ಎನ್ನುವವರಿಗೆ ನಿಮ್ಮ ಕಿವಿಮಾತು?*

ಅನಾಥಾಶ್ರಮದ ಹುಡುಗಿಯನ್ನು ಸೊಸೆಯಾಗಿಸಿಕೊಳ್ಳಿ, ಪ್ರಾಬ್ಲಂ ಸಾಲ್ವ್ಡ್!

**ರವಿಭಟ್, ಲಗ್ಗೆರೆ**

*ಕೌಪೀನಕ್ಕೂ, ಟೈಗೂ ಏನು ವ್ಯತ್ಯಾಸ?*



ಮಾನ ಉಳಿಸಿಕೊಳ್ಳಲು ಕೌಪೀನ, ಮರ್ಯಾದೆ ಹೆಚ್ಚಿಸಿಕೊಳ್ಳಲು ಕಂಠಕೌಪೀನ(ಟೈ)!

**ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ**

*ಹದ್ದಿನ ಕಣ್ಣಿಗೂ, ರಾಜಕಾರಣಿಯ ಕಣ್ಣಿಗೂ ಇರುವ ವ್ಯತ್ಯಾಸವೇನು?*

ಹದ್ದಿನದು ದೂರದೃಷ್ಟಿ, ರಾಜಕಾರಣಿಯದು ದೂರುದೃಷ್ಟಿ!

**ಹರಳಹಳ್ಳಿ ಪುಟ್ಟರಾಜು, ಪಾಂಡವಪುರ**

*ಪ್ರೀತಿಸುವ ಹೃದಯ ಯಾವಾಗಲೂ ತರುಣವಾಗಿರುತ್ತದೇಕೆ?*

ಅದು ಲಬ್ ಡಬ್ ಎನ್ನುವುದರ ಬದಲು ಲವ್ ಲವ್ ಎನ್ನುವುದರಿಂದ!

**ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು**

*ಈಗಿನ ಕಾಲದಲ್ಲೂ ಗುರುವಿನ ಗುಲಾಮನಾಗಲು ಸಾಧ್ಯವೇ?*

ಇಲ್ಲ, ಗುಲಾಮಗಿರಿ ಈಗ ರದ್ದಾಗಿದೆ!

■ ರಾಮ್